ಸಾಕ್ಷಿಯನ್ನು ಪ್ರಮಾಣಿಕರಿಸಿದ ದಿನಾಂಕಃ 16.09.2025

ಪಾರ್ಟೀಸವಾಲು ಪ್ರತಿವಾದಿಯರ ಪರ ಶ್ರೀ ಎ ಹೆಚ್ ಪಿ ವಕೀಲರಿಂದಃ

ನಾನು ವಿದ್ಯಾಬ್ಯಾಸ ಮಾಡಿರುವುದಿಲ್ಲ. ನನ್ನ ಗಂಡನ ಮನೆ ಕುಷ್ಟಗಿ ಎಂದರೆ ಸರಿ. ನನ್ನ ತವರು ಮನೆ ಯಲಬುಂಚಿ ಗ್ರಾಮ ಇರುತ್ತದೆ. ಈ ಕುರಿತು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ವಿವಾಹದ ಪೂರ್ವದಲ್ಲಿ ನಾನು ಯಲಬುಂಚಿ ಗ್ರಾಮದಲ್ಲಿದ್ದೇನು. ನನ್ನ ತಾಯಿಯ ತವರು ಮನೆ ಗುನ್ನಾಳ ಇರುತ್ತದೆ. ನನ್ನತಾಯಿಯ ತಂದೆ ಹೆಸರು ಮುದಕಪ್ಪ. ಸದರಿ ಮುದಕಪ್ಪನಿಗೆ 6 ಜನ ಮಕ್ಕಳು ಇರುತಾರೆ. ಅವರಲ್ಲಿ ನನ್ನ ತಾಯಿ ಹೊರತುಪಡಿಸಿ ಉಳಿದವರ ಹೆಸರುಗಳು ಗೊತ್ತಿರುವುದಿಲ್ಲ. ನನ್ನ ತಾಯಿಯ ತಾಯಿ ಹೆಸರು ಗುಂಡಮ್ಮ ಇರುತ್ತದೆ. ನನ್ನ ತಾಯಿಯ ಸಹೋದರಿಯರನ್ನು ಯಾವ ಗ್ರಾಮಕ್ಕೆ ವಿವಾಹ ಮಾಡಿಕೊಡಲಾಗಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಅಜ್ಜ ಮುದಕಪ್ಪನ ತಂದೆ ಹೆಸರು ನನಗೆ ಗೊತ್ತಿಲ್ಲ.

ಗುನ್ನಾಳದಲ್ಲಿರುವ ಆಸ್ತಿಗಳು ನನ್ನ ತಾಯಿ ನರಸಮ್ಮರವರ ಅಜ್ಜನಿಂದ ಬಂದ ಆಸ್ತಿಗಳು ಎಂದರೆ ಸರಿಯಲ್ಲ. ಗುನ್ನಾಳದಲ್ಲಿರುವ ಆಸ್ತಿಗಳು ಯಾರಿಂದ ಬಂತು ಎಂದರೆ ಸಾಕ್ಷಿಯು ಅಲ್ಲಿ ಯಾವುದೇ ಆಸ್ತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಗುನ್ನಾಳದಲ್ಲಿ ನಮ್ಮ ತಂದೆಗಾಗಲಿ ಅಥವಾ ತಾಯಿಗಾಗಲಿ ಯಾವುದೇ ಆಸ್ತಿಗಳು ಇರುವುದಿಲ್ಲ. ನನ್ನ ತಾಯಿ ನರಸಮ್ಮ ಮತ್ತು ಚಂದಪ್ಪರವರಿಗೆ ಒಟ್ಟು 3 ಜನ ಮಕ್ಕಳು ಇರುತ್ತೇವೆ. ಗುಂಡವ್ವ ಯಾನೆ ಗೌರಮ್ಮರವರನ್ನು ಕೋಳಿಹಾಳ ಗ್ರಾಮಕ್ಕೆ ವಿವಾಹ ಮಾಡಿಕೊಡಲಾಗಿದೆ. 3 ನೇ ವಾದಿಯು ಗುನ್ನಾಳದಲ್ಲಿ ವಾಸ ಇರುತ್ತಾರೆ ಎಂದರೆ ಸಾಕ್ಷಿಯು ಯಲಬುಣಚಿಗು ಬಂದು ಹೋಗುವದು ಮಾಡುತ್ತಾರೆ. ನಾನು

ಮತ್ತು ಇತರೆ ವಾದಿಗಳು ಯಲಬುಣಚಿಯಲ್ಲಿ ವಾಸವಾಗಿರುವ ಕುರಿತು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಗುನ್ಹಾಳದಲ್ಲಿರುವ ಆಸ್ತಿ ನನ್ನ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ನನ್ನ ತಾಯಿ ನರಸವ್ವ ರವರನ್ನು 3 ನೇ ಜೋಪಾನ ಮಾಡಿರುತ್ತಾರೆ. ಗುನ್ಹಾಳದಲ್ಲಿರುವ ಆಸ್ತಿಯನ್ನು ನನ್ನ ಹೆಸರಿಗೆ ಮಾಡಿಕೊಂಡಿದ್ದರಿಂದ 3 ನೇ ವಾದಿ ನನಗೆ ಕಿರಿ ಕಿರಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಗುನ್ಹಾಳದಲ್ಲಿ ನನ್ನ ಹೆಸರಿಗೆ ಆಸ್ತಿ ಇದ್ದರು ಕೂಡಾ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆ ಚಂದಪ್ಪರವರು ಮೂರು ಜನ ಸಹೋದರರು ಇರುತ್ತಾರೆ. ನನ್ನ ತಂದೆಯವರ ತಂದೆ ತಾಯಿ ಹೆಸರು ಬುದ್ದಿವಂತಪ್ಪ ಮತ್ತು ಯಮನಮ್ಮ ಇರುತ್ತದೆ. ಚಂದಪ್ಪ ಮತ್ತು ನರಸಮ್ಮ ರವರಿಗೆ ನಾನು ಮತ್ತು ಉಳಿದವಾದಿಗಳು ಸೇರಿ 3 ಜನ ಮಕ್ಕಳು ಎಂದರೆ ಸರಿ. ನನ್ನ ತಂದೆ ಮರಣಹೊಂದಿ ಸುಮಾರು 16 ವರ್ಷ ಆಗಿರುತ್ತದೆ. ಅವರ ಮರಣದ ದಿನಾಂಕ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ಜೀವಂತ ಇರುತ್ತಾರೆ. ಅವರ ಹೆಂಡತಿ ನೀಲಮ್ಮ ಜೀವಂತ ಇರುತ್ತಾರೆ. 2 ನೇ ಪ್ರತಿವಾದಿ ಮರಿಯಪ್ಪನಿಗೆ 4 ಜನ ಮಕ್ಕಳು ಇರುತ್ತಾರೆ. ಅವರಲ್ಲಿ ಒಬ್ಬರು ಮರಣಹೊದಿರುತ್ತಾರೆ. ಉಳಿದ ಮೂವರು ಜೀವಂತ ಇರುತ್ತಾರೆ. ಅವರೆಂದರೆ ಯಮನವ್ವ , ದ್ರಾಕ್ಷಾಯಣಿ , ಚಂದಾಲಿಂಗಪ್ಪ , ಬುದ್ದಿವಂತಪ್ಪ ಇರುತ್ತಾರೆ. ಈ ಪ್ರಕರಣದಲ್ಲಿ ಚಂದಾಲಿಂಗಪ್ಪ , ದ್ರಾಕ್ಷಾಯಣಿ ಮತ್ತು ಮರಿಯಪ್ಪನ ಹೆಂಡತಿ ನೀಲಮ್ಮರವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ.

ನನ್ನ ಗಂಡನ ಹೆಸರು ದ್ಯಾಮಣ್ಣ ಎಂದರೆ ಸರಿ. ಅವರ ತಂದೆ ತಾಯಿ ಹೆಸರು ಅಡಿವೆಪ್ಪ ಮತ್ತು ಬಾಳಮ್ಮ ಎಂದರೆ ಸರಿ. ಸದರಿ ಬಾಳಮ್ಮನಿಗೆ ಇಬ್ಬರು ಸಹೋದರಿಯರು ಎಂದರೆ ಸರಿ. ಅವರಲ್ಲಿ ನಿಂಗಮ್ಮ ಕುಷ್ಟಗಿಯಲ್ಲಿ ವಾಸ

ಇದ್ದರು ಎಂದರೆ ಸರಿ . ಸಾಕ್ಷಿ ಮುಂದುವರೆದು ಅವರು ಮರಣಹೊಂದಿರುತ್ತಾರೆಎಂದು ನುಡಿದಿರುತ್ತಾರೆ. ಇನ್ನೊಬ್ಬರು ಪಾರ್ವತೆವ್ವ ಇದ್ದು ಅವರನ್ನು ಹೆಸರೂರಗೆ ವಿವಾಹ ಮಾಡಿಕೊಡಲಾಗಿದೆ ಎಂದರೆ ಸರಿ. ನಿಂಗವ್ವ , ಪಾರ್ವತೆವ್ವ ಮತ್ತು ನನ್ನ ಅತೆ ಬಾಳವ್ವರವರು ಬಸವ್ವ ಆಚಾರಿ ರವರ ಮಕ್ಕಳು ಎಂದರೆ ಸರಿ. ಸದರಿ ಬಸವ್ವರವರಿಗೆ ಗಂಡು ಮಕ್ಕಳು ಇಲ್ಲ ಎಂದರೆ ಸರಿ. ಸದರಿ ಬಸವ್ವರವರ ಹೆಣ್ಣಾಸ್ತಿ ನಿಂಗವ್ವ , ಬಾಳವ್ವ ರವರಿಗೆ ಬಂತು ಎಂದರೆ ಸರಿ. ಸಾಕ್ಷಿ ಮುಂದುವರೆದು ಪಾರ್ವತವ್ವ ರವರ ಮಕ್ಕಳು ಬಂದು ಬಾಳವ್ವಳ ಗಂಡ ಅಡಿವೆಪ್ಪನಿಗೆ ಬಿಟ್ಟು ಕೊಟ್ಟಿರುತ್ತಾರೆ.

ನಿಂಗವ್ವಳಿಗೆ ಯಮನಪ್ಪ ಎಂಬ ಮಗ ಇದ್ದಾ ಎಂದರೆ ಸರಿ. ಸದರಿ ಯಮನಪ್ಪನಿಗೆ 2 ನೇ ಪ್ರತಿವಾದಿ ಮರಿಯಪ್ಪನ ಮಗಳಾದ ಯಮನವ್ವ ರವರನ್ನು ವಿವಾಹ ಮಾಡಿಕೊಡಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಯಮನವ್ವ ಮತ್ತು ಯಮನಪ್ಪ ಇಬ್ಬರು ಮರಣಹೊಂದಿರುತ್ತಾರೆ ಎಂದು ನುಡಿಯುತ್ತಾರೆ. ಅಡಿವೆಪ್ಪನ ಹೆಸರಿನಲ್ಲಿ ಎಲ್ಲಾ ಆಸ್ತಿಗಳು ಇದ್ದು ಅವುಗಳಲ್ಲಿ ಭಾಗ ಕೋರಿ ಯಮನವ್ವ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಗೆ ನಾನು ಹಾಜರಾಗಿರುವುದಿಲ್ಲ. ಸದರಿ ದಾವೆಯ ಕುರಿತು ನಾನು ಅಡಿವೆಪ್ಪನೊಂದಿಗೆ ಬಂದು ಕೆ ವಿ ಆಶ್ರೀತ ವಕೀಲರಿಗೆ ಮಾಹಿತಿ ನೀಡಿರುತ್ತೇವೆ ಎಂದರೆ ಸರಿಯಲ್ಲ. ಯಮನವ್ವ ಸಲ್ಲಿಸಿದ ಪ್ರಕರಣದಲ್ಲಿ ಆದೇಶವಾದ ನಂತರ ಈ ನ್ಯಾಯಾಲಯದಲ್ಲಿ ಸಲ್ಲಿಸಿದ ಅಫೀಲನಲ್ಲಿ ರಾಜೀ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಯಮನವ್ವ ಅಡಿವೆಪ್ಪನ ವಿರುದ್ದ ದಾವೆ ಸಲ್ಲಿಸಿದ್ದರಿಂದ ನಾವು ಈ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸಲ್ಲಿಸಿದ ನಂತರ ಯಮನವ್ವಳಿಗೆ ಅನಾರೋಗ್ಯ ಉಂಟಾಯಿತು ಎಂದರೆ ಸರಿ. ಆ ಕಾರಣದಿಂದ ನನ್ನ ಮಾವ ಪರಸಪ್ಪನಿಗೆ ಅಧಿಕಾರ ಪತ್ರ ಬರೆದುಕೊಟ್ಟರು ಎಂದರೆ ಸರಿಯಲ್ಲ.

ಯಮನವ್ವಳು 2008 ರಲ್ಲಿ ಅಡಿವೆಪ್ಪನ ವಿರುದ್ದ ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯನ್ನು ಯಾರು ಯಾರ ವಿರುದ್ದ ಸಲ್ಲಿಸಿದ್ದಾರೆ ಎಂದು ಗೊತ್ತಿರುತ್ತದೆ. ಯಮನವ್ವ ಕುಷ್ಟಗಿಯಲ್ಲಿನ 4 ಎಕರೆ 5 ಗುಂಟೆ ಜಮೀನಿನ ಕುರಿತು ಸಲ್ಲಿಸಿದ ದಾವೆಯನ್ನು ಯಾರು ವಿರುದ್ದ ಸಲ್ಲಿಸಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಯಮನವ್ವ ಸಲ್ಲಿಸಿದ ಅಫೀಲನಲ್ಲಿ ಆದ ರಾಜೀ ಪ್ರಕಾರ ಒಂದು ಎಕರೆ ಯಮನವ್ವಳಿಗೆ ಮತ್ತು 3 ಎಕರೆ 5 ಗುಂಟೆ ಅಡಿವೆಪ್ಪನಿಗೆ ಬಂದ ಬಗ್ಗ ನನಗೆ ಗೊತ್ತಿಲ್ಲ.

ದಾವಾ ಸ್ವತ್ತು ಹಿರಿಯರ ಆಸ್ತಿ ಇರುತ್ತದೆ. ಸದರಿ ಜಮೀನು ನನ್ನ ತಂದೆಯ ತಂದೆಯಿಂದ ಬಂದಿರುತ್ತದೆ. ಸದರಿ ಬುದ್ದಿವಂತಪ್ಪ ದಾವಾ ಸ್ವತ್ತನ್ನು ಖರೀದಿ ಹಿಡಿದಿದ್ದೊರೊ ಅಥವಾ ಅವರಿಗೆ ಅವರ ತಂದೆಯಿಂದ ಬಂದಿತ್ತೊ ನನಗೆ ಗೊತ್ತಿಲ್ಲ. ನಾನು ಯಮನವ್ವ ಮತ್ತು ಬುದ್ದಿವಂತಪ್ಪರವರನ್ನು ನೋಡಿರುವುದಿಲ್ಲ. ಯಮನವ್ವ ಮತ್ತು ಬುದ್ದಿವಂತಪ್ಪ ಮರಣಹೊಂದಿ ಎಷ್ಟು ಆಯಿತು ನನಗೆ ಗೊತ್ತಿಲ್ಲ. ಬುದ್ದಿವಂತಪ್ಪರವರಿಗೆ ಒಟ್ಟು ಎಷ್ಟು ಆಸ್ತಿಗಳು ಇದ್ದವು ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಬುದ್ದಿವಂತಪ್ಪರವರಿಗೆ ಇದ್ದ ಆಸ್ತಿಗಳು ಯಾವ ಗ್ರಾಮದಲ್ಲಿದ್ದವು ಮತ್ತು ಅವುಗಳ ಸರ್ವೆ ನಂಬರ ಗೊತ್ತಾ ಎಂದರೆ ಸಾಕ್ಷಿಯು ಸರ್ವೆ ನಂ. 58 ಯಲಬುಣಚಿ ಗ್ರಾಮದಲ್ಲಿದ್ದು ಅದನ್ನು ಹೊರತುಪಡಿಸಿ ಬೇರೆ ಜಮೀನುಗಳ ಬಗ್ಗ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ. 58 ರ ಹಳೆ ಹಿಸ್ಸಾ ನಂಬರ ಮತ್ತು ಹೊಸ ಹಿಸ್ಸಾ ನಂಬರ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ವಿಸ್ತೀರ್ಣ 3 ಎಕರೆ 31 ಗುಂಟೆ ಇರುತ್ತದೆ.

ದಾವಾ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ಅಯ್ಯಪ್ಪ ಕಾಟಾಪೂರ ರವರ ಜಮೀನು ಪಶ್ಚಿಮ್ಕೆ ದೇವಪ್ಪ ಆವಾರಿರವರ ಜಮೀನು ಉತ್ತರಕ್ಕೆ ರವಿ ಕೊಳ್ಳಿ ರವರ ಜಮೀನು

ದಕ್ಷಿಣಕ್ಕೆ ಚಂದಾಲಿಂಗಪ್ಪ ಯಲ್ಲಪ್ಪಾ ಮಳಣ್ಣಪ್ಪನವರ ರವರ ಜಮೀನು ಇರುತ್ತದೆ. ನನ್ನ ತಂದೆಯವರು ನನ್ನ ಅಜ್ಜ ಜೀವಂತ ಇದ್ದಾಗ ವಿಭಾಗವಾದರೋ ಅಥವಾ ನಂತರ ವಿಭಾಗವಾದರೋ ನನಗೆ ಗೊತ್ತಿಲ್ಲ. ಸದರಿ ವಿಭಾಗವು 1991 ರಲ್ಲಿ ಆಗಿರುತ್ತದೆ. ದಿನಾಂಕ ಮತ್ತು ತಿಂಗಳು ಗೊತ್ತಿಲ್ಲ. ಸದರಿ ವಿಭಾಗವಾದ ಸಮಯದಲ್ಲಿ ನನ್ನ ಅಜ್ಜಿ ಜೀವಂತ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆ ಚಂದಪ್ಪರವರ ಚುನಾನವಣಾ ಗುರುತಿನ ಚೀಟಿ ಮತ್ತು ಆಧಾರ ಕಾರ್ಡನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ದಾಖಲಾತಿಗಳಲ್ಲಿ ಅವರ ಹೆಸರು ಏನು ಇದೆ ಎಂದು ಗೊತ್ತಿಲ್ಲ. ಸಾಕ್ಷಿ ಮಂದುವರೆದು ಚಂದಪ್ಪ ಮಸಣ್ಣಪ್ಪನವರ ಎಂದು ಇದೆ ಎಂದು ನುಡಿಯುತ್ತಾರೆ. ನಾನು ದಾವಾ ಸ್ವತ್ತಿನ ದಾಖಲಾತಿಯನ್ನು ನೋಡಿರುವುದಿಲ್ಲ. ದಾವಾ ಸ್ವತ್ತು ನನ್ನ ಅಜ್ಜನಿಗೆ ಯಾರಿಗೆ , ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಖಾತೆಯು 2000-2001 ರಿಂದ 2 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು 1968-69 ರಲ್ಲಿ ಯಾರ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿಲ್ಲ.

ದಿನಾಂಕ 25.04.1991 ರಲ್ಲಿ ಬುದ್ಧಿವಂತಪ್ಪನ ಮಕ್ಕಳಾದ ಚಂದಪ್ಪ , ಮರಿಯಪ್ಪ ಮತ್ತು ಯಲ್ಲಪ್ಪರವರ ಮದ್ಯೆ ವಿಭಾಗವಾಯಿತು ಎಂದರೆ ಸರಿ. ಸದರಿ ವಿಭಾಗದಲ್ಲಿ 2 ನೇ ಪ್ರತಿವಾದಿ ಮರಿಯಪ್ಪನಿಗೆ 3 ಎಕರೆ 32 ಗುಂಟೆ ಬಂದಿರುತ್ತದೆ ಎಂದರೆ ಸರಿ. ಚಂದಪ್ಪನಿಗೆ ಮತ್ತು ಯಲ್ಲಪ್ಪನಿಗೆ ತಲಾ 3 ಎಕರೆ 31 ಗುಂಟೆ ಬಂದಿರುತ್ತದೆ ಎಂದರೆ ಸರಿ. ಚಂದಪ್ಪನಿಗೆ ಬಂದ 3 ಎಕರೆ 31 ಗುಂಟೆ ಜಮೀನನ್ನು 2 ನೇ ಪ್ರತಿವಾದಿ ಮರಿಯಪ್ಪನಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ 1993-94 ರಲ್ಲಿ ಮೇಲ್ಕಂಡ ಆಸ್ತಿಯನ್ನು 2 ನೇ ಪ್ರತಿವಾದಿಗೆ

ಬಿಟ್ಟುಕೊಟ್ಟಿದ್ದ ವಿಚಾರ ನನಗೆ ಗೊತ್ತಿದ್ದರು ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1993-94 ರಲ್ಲಿ ನಮ್ಮ ತಂದೆ ದಾವಾ ಸ್ವತ್ತನ್ನು 2 ನೇಪ್ರತಿವಾದಿಗೆ ಬಿಟ್ಟು ಕೊಟ್ಟಾಗಿನಿಂದಲೂ ಅವರ ಹೆಸರಿನಲ್ಲಿಯೇ ಸದರಿ ಜಮೀನಿನ ಖಾತೆ ಬರುತ್ತದೆ ಎಂದರೆ ಸರಿಯಲ್ಲ.

2021 ರ ನಂತರ ಮರಿಯಪ್ಪ ದಾವಾ ಸ್ವತ್ತನ್ನು ತನ್ನ ಮಕ್ಕಳಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಈಗ 43 ವರ್ಷ ಇರುತ್ತದೆ. ನನ್ನ ಮದುವೆಯಾಗಿ ಎಷ್ಟು ವರ್ಷ ಆಗಿದೆ ಎಂದು ನನಗೆ ಗೊತ್ತಿಲ್ಲ. ನನಗೆ 4 ಜನ ಮಕ್ಕಳು ಇರುತ್ತಾರೆ. ನನ್ನ ಹಿರಿಯ ಮಗಳ ವಯಸ್ಸು ಎಷ್ಟು ಎಂದು ನನಗೆ ನೆನಪಿಲ್ಲ. ನನಗೆ ಇಬ್ಬರು ಮೊಮ್ಮಕ್ಕಳು ಇರುತ್ತಾರೆ. ನನ್ನ ಮೊಮ್ಮಕ್ಕಳ ವಯಸ್ಸು 3 ವರ್ಷ ಮತ್ತು 1 ವರ್ಷ ಇರುತ್ತದೆ. ನಾನು ವಿವಾಹವಾಗಿ ಬಂದ ನಂತರ ನನ್ನ ಗಂಡನ ಮನೆಯ ಆಸ್ತಿಗಳ ಬಗ್ಗೆ ಪರಿಶೀಲನೆ ಮಾಡಿರುವುದಿಲ್ಲ. ನನ್ನ ತವರು ಮನೆಯ ಆಸ್ತಿಗಳ ಬಗ್ಗೆ ಮತ್ತು ಗಂಡನ ಮನೆಯ ಆಸ್ತಿಗಳ ಬಗ್ಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿಯಲ್ಲ. ನನ್ನ ತಂದೆ ಚಂದಪ್ಪ ವಿಭಾಗವಾದ ನಂತರ ಎಷ್ಟು ವರ್ಷ ಜೀವಂತ ಇದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ವಿವಾಹವಾದ ನಂತರ ನನ್ನ ತಂದೆ ಯೊಂದಿಗೆ ಬಾಂದವ್ಯ ಚೆನ್ನಾಗಿತ್ತು. ನನ್ನ ತಂದೆ ಚಂದಪ್ಪ 2 ನೇ ಪ್ರತಿವಾದಿಗೆ ಆಸ್ತಿ ಬಿಟ್ಟು ಕೊಟ್ಟು ಎಷ್ಟು ವರ್ಷಗಳ ನಂತರ ಮರಣಹೊಂದಿದರು ಎಂದರೆ ಸಾಕ್ಷಿಯು ನನ್ನ ತಂದೆ ಆಸ್ತಿ ಬಿಟ್ಟುಕೊಟ್ಟಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯು 2 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟ ದಾಖಲಾತಿಯನ್ನು ನಮ್ಮ ವಕೀಲರಿಗೆ ನೀಡಿರುವುದಿಲ್ಲ, ಸಾಕ್ಷಿ ಮುಂದುವರೆದು ಯಾವುದೇ ಆಸ್ತಿಯನ್ನು ಬಿಟ್ಟುಕೊಟ್ಟಿಲ್ಲ ಎಂದು ನುಡಿಯುತ್ತಾರೆ.

ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 1993 ರಿಂದ ನನ್ನ ತಂದೆ ಜೀವಂತ ಇರುವವರೆಗೆ ಅವರು ಯಾವುದೇ ಅಫೀಲು ಸಲ್ಲಿಸಿರುವುದಿಲ್ಲ. 2 ನೇ ಪ್ರತಿವಾದಿಯ ಹೆಸರಿಗೆ ಹಕ್ಕು ಬದಲಾವಣೆ ಆಗಿರುವುದನ್ನು ಪ್ರಶ್ನಿಸಿ ನಾನಾಗಲಿ , ನನ್ನ ತಂದೆ ಯಾಗಲಿ ಯಾವುದೆ ಅಫೀಲು ಸಲ್ಲಿಸಿರುವುದಿಲ್ಲ. 2021 ರ ಜನೇವರಿ ತಿಂಗಳನಲ್ಲಿ ದಾವಾ ಸಲ್ಲಿಸಲು ಕಾರಣ ಉಂಟಾಗಿರುತ್ತದೆ. ಸಾಕ್ಷಿ ಮುಂದುವರೆದು ದಿನಾಂಕ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವೆ ಸಲ್ಲಿಸಲು ಕಾರಣವನ್ನು ನಾನೆ ವಕೀಲರಿಗೆ ಹೇಳಿ ಬರೆಸಿರುತ್ತೇನೆ . 1993 ರಲ್ಲಿ ನನ್ನ ತಂದೆ 2 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟ ಕಾಲದಿಂದ ಇಲ್ಲಿಯವರೆಗೂ ದಾವಾ ಸ್ವತ್ತಿನ ಖಾತೆಯು ಮರಿಯಪ್ಪ ಮತ್ತು ಆತನ ಮಕ್ಕಳ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ಅಂದಿನಿಂದ ಇಂದಿನವರೆಗೂ ದಾವಾ ಸ್ವತ್ತಿನ ಪಹಣಿಗಳು 2 ನೇ ಪ್ರತಿವಾದಿ ಮತ್ತು ಅವರ ಮಕ್ಕಳ ಹೆಸರಿನಲ್ಲಿ ಇರುವ ಬಗ್ಗ ನನಗೆ ಗೊತ್ತಿಲ್ಲ. 1993 ರಿಂದ ಇಲ್ಲಿಯವರೆಗೂ ದಾವಾ ಸ್ವತ್ತಿಗೆ 2 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಮಾಲೀಕರು ಮತ್ತು ಸ್ವಾಧೀನದಾರರು ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವೆ ಇರುತ್ತೇವೆ ಎಂದು ನುಡಿಯುತ್ತಾರೆ. ನಾವೇ ಮಾಲೀಕರು ಮತ್ತು ಕಬ್ಜಾದಾರರು ಎಂದು ತೋರಿಸಲು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತಿನ ಕಂದಾಯವನ್ನು ನಾವು ಪಾವತಿ ಮಾಡಿರುವುದಿಲ್ಲ. ಸದರಿ ಕಂದಾಯವನ್ನು 2 ನೇ ಪ್ರತಿವಾದಿ ಮತ್ತು ಆತನ ಮಕ್ಕಳು ಪಾವತಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೆ ಯಾರು ಸ್ವಾಧೀನದಲ್ಲಿದ್ದಾರೆ ಮತ್ತು ಯಾರು ಕಂದಾಯ ಪಾವತಿ ಮಾಡಿದ್ದಾರೆ ಎಂಬ ವಿಚಾರ ನನಗೆ ಗೊತ್ತಿದ್ದರು ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆಯು ಯಲಬುಣಚಿಯಲ್ಲಿನ ಆಸ್ತಿಯನ್ನು 2 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟು ಗುನ್ನಾಳದಲ್ಲಿನ ನನ್ನ ತಾಯಿಯ ಆಸ್ತಿಗೆ ಬಂದರು ಎಂದರೆ ಸರಿಯಲ್ಲ. ನನ್ನ ತಂದೆ ಜೀವಂತ ಇರುವವರೆಗೂ ನನ್ನ ತಂದೆಗೂ ಮತ್ತು 2 ನೇ ಪ್ರತಿವಾದಿಗೂ ಸಂಬಂದ ಚೆನ್ನಾಗಿತ್ತು ಎಂದರೆ ಸರಿಯಲ್ಲ. ಅವರಿಬ್ಬರ ಸಂಬಂದ ಚೆನ್ನಾಗಿದ್ದರೂ ಕೂಡಾ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಹೋದರರ ಸಂಬಂದ ಚೆನ್ನಾಗಿರಲಿ ಎಂದು ನನ್ನ ತಂದೆ ಯಲಬುಣಚಿಯಲ್ಲಿನ ದಾವಾ ಆಸ್ತಿಯನ್ನು 2 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟು ಗುನ್ನಾಳಕ್ಕೆ ಬಂದರುಎಂದರೆ ಸರಿಯಲ್ಲ. ನನ್ನ ತಂದೆ ಮರಣಹೊಂದಿದ ನಂತರ ನಾನು ಯಲಬುಣಚಿ ಗ್ರಾಮಕ್ಕೆ ಹೋಗಿ ಬರುತ್ತೇನೆ. ಆ ಸಮಯದಲ್ಲಿ ಜಮೀನಿಗೆ ಹೋಗಿ ಬರುತ್ತೇನೆ. ಸಾಕ್ಷಿ ಮುಂದುವರೆದು ಅಲ್ಲಿಯೆ ಕೆಲಸ ಕೂಡಾ ಮಾಡುತ್ತೇನೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ದಾವಾ ಸ್ವತ್ತಿನ ಪಹಣಿ ಗಳನ್ನುಪರಿಶೀಲನೆ ಮಾಡಿರುವುದಿಲ್ಲ. ದಾವೆ ಸಲ್ಲಿಸಲು ನಾನು ಮತ್ತು ಇತರೆ ವಾದಿಯರು ಸೇರಿ ವಕೀಲರಿಗೆ ಮಾಹಿತಿ ನೀಡಿರುತ್ತೇವೆ. ದಾವೆ ಸಲ್ಲಿಸಿದ ನಂತರ 3 ನೇ ವಾದಿ ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದರೆ ಸರಿಯಲ್ಲ. 1 ಮತ್ತು 3 ನೇ ವಾದಿಯರಿಗೆ ಇಷ್ಟ ವಿಲ್ಲದಿದ್ದರೂ ನಾನೆ ಒತ್ತಾಯ ಮಾಡಿ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಇಲ್ಲದೆ ಇದ್ದರೂ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಚಂದಪ್ಪ ದಾವಾ ಸ್ವತ್ತನ್ನುಯಲಬುಣಚಿ ಗ್ರಾಮದ ಹಿರಿಯರ ಸಮಕ್ಷಮ ಮತ್ತು ಕಂದಾಯ ಅಧಿಕಾರಿಗಳ ಸಮಕ್ಷಮ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು, ಕುಷ್ಟಗಿ